# ‘ಅಮ್ಮ ನೋಡೆ ಕಣ್ ಬಿಟ್ಟು ನಿನ್ನಯ ಮಗನ ಒಳಗುಟ್ಟು’



ಕಾಲೇಜು ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರೊ.ಪಿ.ಶಿವಶಂಕರ್, ನ್ಯಾ.ಹೊಂಬೇಗೌಡ ಹಾಗೂ ಭಾಷಣ ಮಾಡುತ್ತಿರುವ ಅಶ್ವತ್ಥನಾರಾಯಣ (1966ರಲ್ಲಿ)

**ಅಮ್ಮನ ಕೈಯಲ್ಲಿ ನನಗೆ ಬಂದಿದ್ದ ಪಾರಿತೋಷಕಗಳನ್ನು ಇರಿಸಿ, ಹೂವಿನ ಹಾರವನ್ನು ನನ್ನ ದೇವರ (ಅಮ್ಮನ) ಕೊರಳಿಗೆ ಹಾಕಿದೆ. ಎಲ್ಲರ ಸಂತೋಷ ಮುಗಿಲು ಮುಟ್ಟಿತು. ಅವಳಿಗೆ ಆನಂದ ತುಂಬಿ ಬಂದಿದ್ದು, ಕಣ್ಣುಗಳು ತೇವವಾಗುತ್ತಿತ್ತು ಹಾ! ಆ ದೃಶ್ಯ ನನ್ನ ಎದೆತುಂಬಿತು. ಕೋಟಿ ರೂಪಾಯಿ ಇದ್ದರೂ, ಆ ಅಮೃತ ಘಳಿಗೆ ಮತ್ತೊಮ್ಮೆ ಸಿಗದು ನನ್ನ ಜೀವನದಲ್ಲಿ..!**

**■ ಕೆ.ಎಸ್. ಅಶ್ವತ್ಥನಾರಾಯಣ**

ಕಳೆದು ಹೋದ ಹಲವು ಸಿಹಿ ನೆನಪುಗಳು ಆಗಿಂದಾಗ್ಗೆ ಸ್ಮೃತಿಪಟಲದಲ್ಲಿ ಬಂದು ಹೋಗುತ್ತಿರುತ್ತವೆ. ಸುಮಾರು 51 ವರ್ಷಗಳ ಹಿಂದಿನ ಆ ದಿನ. ಬೆಂಗಳೂರು ಆನಂದರಾವ್ ವೃತ್ತದ ಬಳಿ ಇರುವ ಶ್ರೀ ರೇಣುಕಾಚಾರ್ಯ ಕಾಲೇಜು (ಎಸ್‌ಜೆಆರ್‌ಸಿ)ನಲ್ಲಿ ಅಂತಿಮ ಬಿ.ಎಸ್ಸಿ. ಓದುತ್ತಿದ್ದಾಗ ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷನಾಗಿದ್ದೆ. ಅಂದು ಕಾಲೇಜಿನ ವಾರ್ಷಿಕೋತ್ಸವ ಕಾರ್ಯಕ್ರಮವಿತ್ತು. ಮುಖ್ಯ ಅತಿಥಿಯಾಗಿ ಬಂದು ಸಮಾರೋಪ ಸಮಾರಂಭ ಭಾಷಣ ಮಾಡಿದ್ದು, ರಾಜ್ಯ ಹೈಕೋರ್ಟಿನ ಅಂದಿನ ಮುಖ್ಯ ನ್ಯಾಯಾಧೀಶರಾದ ನ್ಯಾ. ಹೆಚ್. ಹೊಂಬೇಗೌಡ ಅವರು. ಅಖಿಲ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್‌ನ ಅಧ್ಯಕ್ಷರೂ, ಲಾ ಕಾಲೇಜಿನ ಪ್ರಿನ್ಸಿಪಾಲರೂ ಆಗಿದ್ದ ಪ್ರೊ. ಪಿ. ಶಿವಶಂಕರ್ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದು, ನಮ್ಮ ಕಾಲೇಜಿನ ಜನಪ್ರಿಯ ಪ್ರಿನ್ಸಿಪಾಲರಾದ ಪ್ರೊ. ಜಿ. ವೃಷಭೇಂದ್ರಪ್ಪ ಅವರು ವೇದಿಕೆ ಮೇಲೆ ಆಸೀನರಾಗಿದ್ದರು. ಅಂಥ ಮಹಾನ್ ವ್ಯಕ್ತಿಗಳ ಜತೆ ನಾನು ವೇದಿಕೆಯನ್ನು ಹಂಚಿಕೊಂಡಿದ್ದು ನನ್ನ ಜೀವನದಲ್ಲಿ ಒಂದು ಸುಯೋಗವೇ ಸರಿ.

ಕಣ್ಣು ಕುಕ್ಕುವ ವಿದ್ಯುತ್ ದೀಪಗಳು, ಮುಂದೆ ಸಾವಿರಾರು ಜನ, ವೇದಿಕೆ ಮೇಲಿನ ಗಣ್ಯರು, ಇಂತಹವರ ಮಧ್ಯೆ ನಾನು ನಿಂತು ಭಾಷಣ ಮಾಡುತ್ತಿದ್ದಾಗ ಚಪ್ಪಾಳೆ ಸುರಿಮಳೆ. ಇದನ್ನು ನೆನೆಸಿಕೊಂಡಾಗ ಈಗಲೂ ಮೈರೋಮಾಂಚನವಾಗುತ್ತದೆ. ನಂತರ ದಿನಗಳಲ್ಲಿ ಅನೇಕ ಸಮಾರಂಭಗಳಲ್ಲಿ ಭಾಷಣ ಮಾಡಿದ್ದರೂ, ಆ ದಿನದ ನೆನಪು ನನ್ನ ಮನಸ್ಸಿನಲ್ಲಿ ಇನ್ನೂ ಹಚ್ಚಹಸಿರಾಗಿದೆ.

ಕಾರ್ಯಕ್ರಮ ಮುಗಿದ ನಂತರ, ನನ್ನ ಕೆಲ ಜವಾಬ್ದಾರಿ ಕೆಲಸ ಮುಗಿಸಿ ಕಾಲೇಜು ಬಿಡುವ ಹೊತ್ತಿಗೆ ಸುಮಾರು ರಾತ್ರಿ 10 ಗಂಟೆ ಆಗಿತ್ತು. ಮನೆಗೆ ಹೊರಡಲು ಕಾಲೇಜಿನ ಹತ್ತಿರವೆ ಬಂದ ಬಸ್ಸು ಹತ್ತುತ್ತಿರುವಾಗ ಬಸ್ಸಿನಲ್ಲಿ ಇದ್ದ ಎಲ್ಲಾ ಜನ ನನ್ನತ್ತ ನೋಡುತ್ತಿದ್ದರು. ಕಾರಣ, ಅಂದು ನನಗೆ ಬಂದಿದ್ದ ಪಾರಿತೋಷಕಗಳು ಒಂದು ಕೈಯಲ್ಲಿ ಮತ್ತು ಅಂದು ನನಗೆ ವಿದ್ಯಾರ್ಥಿ ವೃಂದದಿಂದ ಹಾಕಿಸಿಕೊಂಡಿದ್ದ ದೊಡ್ಡ ಹೂವಿನಹಾರ ಮತ್ತೊಂದು ಕೈಯಲ್ಲಿತ್ತು. ಆನಂದದಿಂದ ತೇಲಿಹೋಗಿದ್ದ ನನಗೆ, ನಾನು ಇಳಿಯುವ ಬಸ್‌ಸ್ಟಾಪನ್ನು ನೆನೆಪಿಸಿಕೊಟ್ಟವರು ಕಂಡಕ್ಟರ್. ಬಸ್ ಇಳಿದು ಮನೆಯ ಕಡೆ ನಡೆದೆ. ರಸ್ತೆಯಲ್ಲಿ ನನ್ನ ಶೂ ಶಬ್ದ ಮಾತ್ರ ಕೇಳಿಸುತ್ತಿತ್ತು.

ಮಲ್ಲೇಶ್ವರದ ರಸ್ತೆಗಳು ಪ್ರಶಾಂತವಾಗಿತ್ತು. ಆಗ ಯಾರ ಮನೆಯಲ್ಲೂ ಟೀವಿಗಳಿರಲಿಲ್ಲ. ಯಾರ ಬಳಿಯೂ ಮೊಬೈಲ್‌ಗಳಿರಲಿಲ್ಲ. ಈಗಿನಂತೆ ಬೈಕುಗಳು, ಕಾರುಗಳ ಅಬ್ಬರವಿರಲಿಲ್ಲ. ಅಲ್ಲೊಬ್ಬ, ಇಲ್ಲೊಬ್ಬರು ಸೈಕಲ್ ಮೇಲೆ ಓಡಾಡುತ್ತಿದ್ದರು. ನಮ್ಮ ಮನೆಯ ಮುಂಬಾಗಿಲು ತೆರೆದಿತ್ತು. ಸದ್ದಿಲ್ಲದೆ ಗೇಟು ತೆಗೆದು ಒಳಗೆ ಹೋದೆ. ಹಜಾರದಲ್ಲಿ ನನಗಾಗಿ ಅಪ್ಪ, ಅಮ್ಮ, ಅಕ್ಕಂದಿರು, ತಂಗಿಯರು, ಅಣ್ಣಂದಿರೂ ಎಲ್ಲಾ ಕಾದಿದ್ದರು. ನನ್ನನ್ನು ಆ ಪೋಷಾಕಿನಲ್ಲಿ ನೋಡಿ ಎಲ್ಲರೂ ಒಮ್ಮೆಲೆ ಜೋರಾಗಿ ಹರ್ಷೋದ್ಗಾರ ಮಾಡಿದರು. ಬಹುಶಃ ಸುತ್ತಮುತ್ತಲಿನ ಮನೆಯ ಜನಕ್ಕೆ ಗಾಬರಿ ಆಗಿರಬಹುದು. ಅಮ್ಮ ಚಾಪೆ ಮೇಲೆ ಆರಾಮಾಗಿ ಮಲಗಿದ್ದಳು. ನಾನು ನೇರ ಅವಳ ಹತ್ತಿರ ಹೋಗಿ ಅವಳ ಸುತ್ತ ಸುತ್ತುತ್ತಾ, ‘ಅಮ್ಮ ನೋಡೆ ಕಣ್ ಬಿಟ್ಟು ನಿನ್ನಯ ಮಗನ ಒಳಗುಟ್ಟು’ (ಅಂದಿನ ಜನಪ್ರಿಯ ಹಾಡು) ಹಾಡುತ್ತಾ ಕುಣಿದಾಡಿದೆ. ಎದ್ದುನಿಂತ ಅಮ್ಮನ ಕೈಯಲ್ಲಿ ನನಗೆ ಬಂದಿದ್ದ ಪಾರಿತೋಷಕಗಳನ್ನು ಇರಿಸಿ, ಹೂವಿನ ಹಾರವನ್ನು ನನ್ನ ದೇವರ (ಅಮ್ಮನ) ಕೊರಳಿಗೆ ಹಾಕಿದೆ.

ಎಲ್ಲರ ಸಂತೋಷ ಮುಗಿಲು ಮುಟ್ಟಿತು. ಅವಳಿಗೆ ಆನಂದ ತುಂಬಿ ಬಂದಿದ್ದು, ಕಣ್ಣುಗಳು ತೇವವಾಗುತ್ತಿತ್ತು ಹಾ! ಆ ದೃಶ್ಯ ನನ್ನ ಎದೆತುಂಬಿತು. ಕೋಟಿ ರೂಪಾಯಿ ಇದ್ದರೂ, ಆ ಅಮೃತ ಘಳಿಗೆ ಮತ್ತೊಮ್ಮೆ ಸಿಗದು ನನ್ನ ಜೀವನದಲ್ಲಿ..! ■